ವಿಧವೆಯರಿಗೆ ಮತ್ತು ವಯಸ್ಕರ ಮಾಸಾಶನ ಕೊಡುವಲ್ಲಿ ವಿಳಂಬವಾಗುತ್ತಿರುವುದು.

೧೪೮೪. ಶ್ರೀ ಬಿ. ಎಸ್. ಚಂದ್ರಶೇಖರಯ್ಯ (ತಿಪಟೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧವೆಯರ ಮತ್ತು ವಯಸ್ಕರ ಮಾಸಾಶನಗಳನ್ನು ಅಂಚೆ ಮಂಜೂರಾತಿಯಿಂದ ಕಳುಹಿಸುತ್ತಿದ್ದು ಅದು ಸಂಬಂಧಪಟ್ಟವರ ಕೈ ಸೇರುವುದು ವಿಳಂಬವಾಗುತ್ತಿರುವುದರಿಂದ ಅಂಚೆ ಇಲಾಖೆಯಲ್ಲಿ ಅವರವರ ಉಳಿತಾಯ ಲೆಕ್ಕಗಳನ್ನು ತೆಗೆದು ಈ ವೇತನಗಳನ್ನು ಜಮಾ ಮಾಡುವುದು ಸೂಕ್ತವಲ್ಲವೇ ಹಾಗೂ ಈ ಲೆಕ್ಕಗಳನ್ನು ತೆಗೆಯುವುದರಿಂದ ಒಬ್ಬರಿಗೆ ಎರಡು ರೀತಿಯ ಮಾಸಾಶನಗಳು ಪಾವತಿಯಾಗುವುದನ್ನು ತಪ್ಪಿಸಬಹುದೆಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಮತ್ತು ಆ). ಈಗಾಗಲೇ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಬಟವಾಡೆ ಮಾಡುವ ಪದ್ಧತಿಯನ್ನು ಸರಕಾರದ ಆಜ್ಞೆ ಕ್ರಮಾಂಕ ಎಸ್‌ಡಬ್ಲ್ಯೂ ಎಲ್‌೩೩ ಒಎಪಿ ೮೪ ದಿನಾಂಕ ೧೦–೫–೮೫ರ ಪ್ರಕಾರ ಜಾರಿಗೆ ತರಲಾಗಿದೆ. ಅಂಚೆ ಇಲಾಖೆಯ ಉಳಿತಾಯ ಲೆಕ್ಕಗಳನ್ನು ತೆಗೆಯುವ ವಿಚಾರವನ್ನು ಅಂಚೆ ಇಲಾಖೆಯೊಡನೆ ಸಮಾಲೋಚಿಸಿ ಪರಿಶೀಲಿಸಲಾಗುವುದು.

ಪರಿಶಿಷ್ಟ ವರ್ಗಗಳ ಹೆಸರುಗಳನ್ನು ಪರ್ಯಾಯ ಪದಗಳನ್ನಾಗಿ ಸಂವಿಧಾನದಲ್ಲಿ ಸೇರಿಸುವುದು.

೧೧೬೯. ಶ್ರೀ ಜಿ. ರಾಜೂಗೌಡ (ಹನೂರ್).–ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ವರ್ಗಗಳ ಹೆಸರುಗಳ ಪರ್ಯಾಯ ಪದಗಳನ್ನು ಸಂವಿಧಾನದ ಪರಿಶಿಷ್ಟದಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆಯೇ?

ಆ) ಪರ್ಯಾಯ ಪದಗಳಡಿಯಲ್ಲಿ ಬರುವ ಪರಿಶಿಷ್ಟ ವರ್ಗದವರಿಗೆ ನಾಗರೀಕ ಹಕ್ಕು ಬಾಧ್ಯತಾ ತನಿಖಾ ದಳದವರಿಂದ ಕಿರುಕುಳವಾಗುತ್ತಿರುವುದು ಸರ್ಕಾರದವರು ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಕಿರುಕುಳ ನಿವಾರಣೆಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಯವರು).—

ಅ) ಹೌದು.

ಆ) ಕೆಲವು ಪ್ರಕರಣಗಳಲ್ಲಿ ಕಾರ್ಖಾನೆ ಅಡಳಿತವರ್ಗ ಅಭ್ಯರ್ಥಿಗಳ ಮೇಲೆ ಶಿಸ್ತಿನಕ್ರಮ ಜರುಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತೆ.

ಇ) ಪರ್ಯಾಯ ಪದಗಳನ್ವಯ ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ಕೊಡುವ ಬಗ್ಗೆ ಮತ್ತು ಪಾತ್ರತೆಯ ಸಂಬಂಧಿಸಿದ ವಿಷಯಗಳ ಬಗ್ಗೆ ಒಂದು ಪರಿಪೂರ್ಣ ವರದಿಯನ್ನೊದಗಿಸಲು ಸಮಿತಿಯೊಂದನ್ನು ರಚಿಸಿ ವರದಿಯನ್ನಾದರಿಸಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲು ಸರ್ಕಾರ ಉದ್ದೇಶಿಸಿದೆ.

ಶಿಕಾರಿಪುರ ಜೋರಡಿ ರಸ್ತೆಯನ್ನು ಡಾಂಬರ ರಸ್ತೆಯನ್ನಾಗಿ ಮಾಡುವುದು.

೬೧೯. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ಜೋರಡಿ ರಸ್ತೆಯನ್ನು ಟಾರ್ ಮಾಡಲು ಬಜೆಟ್ಟಿನಲ್ಲಿ ಹಣ ಮಂಜೂರು ಮಾಡಿದ ವರ್ಷ ಯಾವುದು ಹಾಗೂ ಎಷ್ಟು ಕಿ.ಮೀ. ರಸ್ತೆಗಾಗಿ ಮಂಜೂರಾಗಿದೆ.

ಅ) ಈವರೆಗೆ ಎಷ್ಟು ಕಿಲೋಮೀಟರ್ ರಸ್ತೆ ಆಗಿದೆ.

ಇ) ಉಳಿದ ಕೆಲಸ ಯಾವಾಗ ಮುಗಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ. (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಎ) ಮಂಜೂರು ಮಾಡಿದ ವರ್ಷ, ೧೯೮೨-೮೩. ಅಂದಾಜಿನ ಮೊತ್ತ ೫,೦೦,೦೦೦ರೂ.

ಬಿ) ಮಂಜೂರಾಗಿರುವ ಉದ್ದ ೧) ಮರು ಜಲ್ಲಿ ಹಾಕುವುದು ೪.೨೫ ಕಿ.ಮೀ.

೨) ಟಾರು ಹಾಕುವುದು ೪.೫೦ ಕಿ.ಮೀ.

ಆ) ಮೇಲ್ಕಂಡ ರಸ್ತೆಯ ಅಂದಾಜು ಪಟ್ಟಿಯಲ್ಲಿ ಮರು ಜಲ್ಲಿ ಹಾಕಲು ೪.೨೫ ಕಿ.ಮೀ. ಉದ್ದವೂ ಮತ್ತು ಟಾರು ಹಾಕಲು ೪.೫೦ ಕಿ.ಮೀ. ಉದ್ದವೂ ಸೇರಿತ್ತು. ಇದರಲ್ಲಿ ಈಗಾಗಲೇ ೪.೨೫ ಕಿ.ಮೀ. ಉದ್ದಕ್ಕೆ ಮರು ಜಲ್ಲಿ ಹಾಕುವ ಕೆಲಸವು ಪೂರ್ಣಗೊಂಡಿದೆ. ೨.೨೦ ಕಿ.ಮೀ. ಉದ್ದಕ್ಕೆ ಟಾರು ಹಾಕುವ ಕೆಲಸವು ಮುಗಿದಿದ್ದು, ಇನ್ನುಳಿದ ೨.೩೦ ಕಿ.ಮೀ. ಉದ್ದಕ್ಕೆ ಟಾರು ಹಾಕಬೇಕಾದ ಕೆಲಸವು ಪ್ರಗತಿಯಲ್ಲಿದೆ.

ಇ) ಇನ್ನುಳಿದ ೨.೩೦ ಕಿ.ಮೀ. ಉದ್ದಕ್ಕೆ ಟಾರು ಹಾಕುವ ಕೆಲಸವನ್ನು ಆರ್ಥಿಕ ಲಭ್ಯತೆಗನುಗುಣವಾಗಿ ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

ಹೊನ್ನಾಳಿ ತಾಲ್ಲೂಕು ದಿಡಗೂರು ಗ್ರಾಮದ ಏತ ನೀರಾವರಿ ಯೋಜನೆಯ ಬಗ್ಗೆ.

೫೬೬. ಶ್ರೀ ಡಿ. ಬಿ. ಬಸವನಗೌಡ (ಹೊನ್ನಾಳಿ).—ಮಾನ್ಯ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊನ್ನಾಳಿ ತಾಲ್ಲೂಕು ದಿಡಗೂರು ಗ್ರಾಮಕ್ಕೆ ಏತ ನೀರಾವರಿ ಯೋಜನೆಯ ಬಗ್ಗೆ ಮಂಜೂರಾಗಿದ್ದರೂ ಅಂದಾಜು ತಯಾರಾಗಿ ಸರಕಾರದವರ ಮಂಜೂರಾತಿ ದೊರೆತಿದ್ದರೂ ಸಹ ಕಾಮಗಾರಿಯನ್ನು ಕೈಗೊಳ್ಳದಿರಲು ಕಾರಣಗಳೇನು ಮತ್ತು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೊನ್ನಾಳಿ ತಾಲ್ಲೂಕು ದಿಡಗೂರು ಗ್ರಾಮದ ಹತ್ತಿರದ ಏತ ನೀರಾವರಿಯ ಬಗ್ಗೆ ಅಂದಾಜು ಪಟ್ಟಿಯನ್ನು ೨೧.೭೫ ಲಕ್ಷ ರೂಪಾಯಿಗಳಿಗೆ ತಯಾರಿಸಲಾಗಿದೆ. ಆದರೆ ಅಂದಾಜು ಪಟ್ಟಿಯು ತಾಂತ್ರಿಕ ಮಂಜೂರಾತಿಯು ಇನ್ನೂ ಆಗಿರುವುದಿಲ್ಲ. ಕಾರಣವೇನೆಂದರೆ ತಾಂತ್ರಿಕ ಮಂಜೂರಾತಿಯ ಮುನ್ನ ಕೆಲವು ವಿವರವಾದ ತಾಂತ್ರಿಕ ಪರಿಶೀಲನೆಯಾಗಬೇಕಾಗಿದೆ. ಅಂದಾಜು ಪಟ್ಟಿಗೆ ಆಡಳಿತ ಮಂಜೂರಾತಿ ದೊರೆತನಂತರ ಕೆಲಸವನ್ನು ಪ್ರಾರಂಭಿಸಲಾಗುವುದು.

ಅಫಜಲಪುರ ಕೆರೆ ಒಡೆದಿರುವ ಬಗ್ಗೆ.

೫೫೧೫. ೧) ಶ್ರೀ ಮಾಲಿಕಯ್ಯ ಗುತ್ತೇದಾರ್, ೨) ಶ್ರೀ ಧರ್ಮಸಿಂಗ್, ಮಲ್ಲಿಕಾರ್ಜುನ ಖರ್ಗೆ ೪) ಶ್ರೀ ವೀರಯ್ಯಸ್ವಾಮಿ, ೫) ಶ್ರೀ ಶರಣಬಸಪ್ಪ ಪಾಟೀಲ್ ೬) ಶ್ರೀ ರಾಮಕೃಷ್ಣ.—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆ ಅಫಜಲ್‌ಪುರದಲ್ಲಿರುವ ಕೆರೆಯು ಕಳೆದ ಮೇ ತಿಂಗಳ ೧೫ ರಂದು ಒಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಮೇಲ್ಕಂಡ ಸ್ಥಳಕ್ಕೆ ಭೇಟಿ ನೀಡಿದ್ದಾಗ ತೊಂದರೆಗೀಡಾದ ರೈತರಿಗೆ ಪರಿಹಾರ ನೀಡುವುದಾಗಿ ಭರವಸೆ ಕೊಟ್ಟಿದ್ದು ಈವರೆವಿಗೂ ಪರಿಹಾರ ನೀಡದಿರುವುದು ನಿಜವೇ?

ಇ) ಹಾಗಿದ್ದಲ್ಲಿ ಮೇಲ್ಕಂಡ ವಿಷಯದಲ್ಲಿ ಸರ್ಕಾರದವರು ತೆಗೆದುಕೊಂಡ ಕ್ರಮವೇನು?